# ಕರ್ನಾಟಕ ವಿಧಾನ ಪರಿಷತ್ತು

**ನೂರ ಮೂವತ್ತಾರನೆಯ ಅಧಿವೇಶನ**

**ಕಾರ್ಯಕಲಾಪಗಳ ಪಟ್ಟಿ**

**ಗುರುವಾರ, ದಿನಾಂಕ: 13ನೇ ಡಿಸೆಂಬರ್, 2018**
**(ಸಮಯ: ಬೆಳಗ್ಗೆ: 10.30 ಗಂಟೆಗೆ)**

******

## 01. ಪ್ರಶ್ನೋತ್ತರ

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ನಾಲ್ಕನೆಯ ಪಟ್ಟಿ
ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ನಾಲ್ಕನೆಯ ಪಟ್ಟಿ

## 02. ವರದಿಯನ್ನೊಪ್ಪಿಸುವುದು

**ಶ್ರೀ ಐವನ್ ಡಿ'ಸೋಜಾ** (ಸದಸ್ಯರು, ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿ) ಅವರು 2018-19ನೇ ಸಾಲಿನ ವಿಧಾನ ಮಂಡಲದ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಮಿತಿಯ **ಮಧ್ಯಂತರ ವರದಿಗಳನ್ನು** ಒಪ್ಪಿಸುವುದು.

## 03. ಅರ್ಜಿಯನ್ನೊಪ್ಪಿಸುವುದು

**ಶ್ರೀ ಕೋಟ ಶ್ರೀನಿವಾಸ ಪೂಜಾರಿ** (ಮಾನ್ಯ ವಿರೋಧ ಪಕ್ಷದ ನಾಯಕರು) ಅವರು ಉಡುಪಿ ಜಿಲ್ಲೆ, ಶಿವಳ್ಳಿ ಗ್ರಾಮದ ಸರ್ವೆ ನಂ. 51ರಲ್ಲಿ 0.50 ಎಕರೆ ಜಮೀನನ್ನು ಜಿ.ಎಸ್.ಬಿ ಟ್ರಸ್ಟ್ (ರಿ) ಮಣಿಪಾಲ ಇವರಿಗೆ ಮಂಜೂರಾತಿ ನೀಡುವ ಕುರಿತು ಅರ್ಜಿಯನ್ನು ಒಪ್ಪಿಸುವುದು.

## 04. ಚುನಾವಣಾ ಪ್ರಸ್ತಾವಗಳು

**ಡಾ: ಜಯಮಾಲ ರಾಮಚಂದ್ರ (ಮಾನ್ಯ ಸಭಾನಾಯಕರು ಹಾಗೂ ಸಚಿವರು) ಅವರು:-**

ಅ) ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸೆನೆಟ್‌ಗೆ ಅಧಿನಿಯಮ 1994 ಕಲಂ 21(1)ರ ರೀತ್ಯಾ ವಿಧಾನ ಪರಿಷತ್ತಿನ ಇಬ್ಬರು ಸದಸ್ಯರುಗಳನ್ನು ಚುನಾಯಿಸಬೇಕೆಂದು ಸೂಚಿಸುವುದು.

ಆ) ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಾಯ್ದೆ 2009ರ ಪ್ರಕರಣ 20(ಐ)ರನ್ವಯ ವಿಶ್ವವಿದ್ಯಾನಿಲಯದ ಸಿಂಡಿಕೇಟ್‌ಗೆ ವಿಧಾನ ಪರಿಷತ್ತಿನ ಒಬ್ಬ ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

..2

## 05. ಗಮನ ಸೆಳೆಯುವ ಸೂಚನೆಗಳು

**ಅ) ಡಾ: ವೈ.ಎ. ನಾರಾಯಣಸ್ವಾಮಿ** ಅವರು ವಾಜಪೇಯಿ ನಗರ ವಸತಿ ಯೋಜನೆಯಡಿಯಲ್ಲಿ ನಿರ್ಮಿಸಿರುವ 75 ಮನೆಗಳನ್ನು 2008ರಲ್ಲಿ ಹೆಬ್ಬಾಳ ವಿಧಾನ ಸಭಾ ಕ್ಷೇತ್ರದ ನಿವಾಸಿಗಳಿಗೆ ಹಂಚಿಕೆ ಮಾಡಿರುವ ಫಲಾನುಭವಿಗಳು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಸಂಪೂರ್ಣವಾಗಿ ಹಣವನ್ನು ಪಾವತಿಸಿದ್ದರೂ ಸಹ ಮನೆಗಳ ಸ್ವಾಧೀನ ಹಾಗೂ ಹಕ್ಕು ಪತ್ರ ನೀಡದಿರುವ ಬಗ್ಗೆ **ಮಾನ್ಯ ನಗರಾಭಿವೃದ್ಧಿ ಮತ್ತು ವಸತಿ ಸಚಿವರ** ಗಮನ ಸೆಳೆಯುವುದು.

**ಆ) ಶ್ರೀಯುತರುಗಳಾದ: ಟಿ.ಎ. ಶರವಣ ಹಾಗೂ ಕೆ.ಟಿ. ಶ್ರೀಕಂಠೇಗೌಡ** ಅವರುಗಳು ಬೆಂಗಳೂರು ಮಹಾನಗರ ಪಾಲಿಕೆಯ ಮಹದೇವಪುರ ವ್ಯಾಪ್ತಿಯಲ್ಲಿನ ಮಂಡೂರು ತ್ಯಾಜ್ಯ ವಿಲೇವಾರಿ ಘಟಕದ ಯೋಜನೆಯು ಸಮರ್ಪಕವಾಗಿ ಫಲಕಾರಿಯಾಗದಿರುವ ಬಗ್ಗೆ **ಮಾನ್ಯ ಉಪ ಮುಖ್ಯಮಂತ್ರಿಯವರ** ಗಮನ ಸೆಳೆಯುವುದು.

## 06. ನಿಯಮ 330ರ ಮೇರೆಗೆ

**ಅ) ಶ್ರೀಯುತರುಗಳಾದ: ಐವನ್ ಡಿ'ಸೋಜಾ, ಬಿ.ಎಂ. ಫಾರೂಖ್ ಹಾಗೂ ಕೆ. ಹರೀಶ್ ಕುಮಾರ್** ಅವರುಗಳು ಕರಾವಳಿ ಜಿಲ್ಲೆಗಳಲ್ಲಿ ಮರಳು ಸಮಸ್ಯೆ ತೀವ್ರಗೊಂಡಿದ್ದು, ಈ ಸಂಬಂಧ ಸರ್ಕಾರ ಮತ್ತು ಖಾಸಗಿ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿರುವುದರಿಂದ ಕಾರ್ಮಿಕರು ಅನುಭವಿಸುತ್ತಿರುವ ತೊಂದರೆ ಬಗ್ಗೆ ಪ್ರಸ್ತಾಪಿಸುವುದು.

**ಆ) ಶ್ರೀಯುತರುಗಳಾದ: ಹೆಚ್.ಎಂ. ರೇವಣ್ಣ, ಕೆ. ಅಬ್ದುಲ್ ಜಬ್ಬಾರ್, ಪಿ.ಆರ್. ರಮೇಶ್ ಹಾಗೂ ಜಿ. ರಘು ಆಚಾರ್** ಅವರುಗಳು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಆಶ್ರಯದಲ್ಲಿ ಕೈಗೊಂಡ ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ನೀಡುವಲ್ಲಿ ವಿಳಂಬವಾಗಿರುವ ಬಗ್ಗೆ ಪ್ರಸ್ತಾಪಿಸುವುದು.

## 07. ನಿಯಮ 68ರ ಮೇರೆಗೆ ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಮುಂದುವರೆದ ಚರ್ಚೆ ಹಾಗೂ ಸರ್ಕಾರದಿಂದ ಉತ್ತರ

| | |
|---|---|
| **ಶ್ರೀಯುತರುಗಳಾದ:**<br>**ಕೋಟ ಶ್ರೀನಿವಾಸ ಪೂಜಾರಿ,**<br>**ಮಾನ್ಯ ವಿರೋಧ ಪಕ್ಷದ ನಾಯಕರು**<br>**ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ,**<br>**ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು**<br>**ಹಾಗೂ ಮಾನ್ಯ ಸದಸ್ಯರುಗಳಾದ:**<br>**ಆಯನೂರು ಮಂಜುನಾಥ**<br>**ರಘುನಾಥ್‌ರಾವ್ ಮಲ್ಕಾಪೂರೆ**<br>**ಡಾ: ತೇಜಸ್ವಿನಿಗೌಡ ಹಾಗೂ**<br>**ಎನ್. ರವಿಕುಮಾರ್** | **ರಾಜ್ಯದಲ್ಲಿ ಭೀಕರ ಬರಗಾಲ ಮತ್ತು ಈ ಸಂಬಂಧ ರೈತರು ಆತ್ಮಹತ್ಯೆಗೆ ಒಳಗಾಗುತ್ತಿರುವ ಬಗ್ಗೆ.** |

## 08. ಅರ್ಧ ಗಂಟೆ ಕಾಲಾವಧಿ ಚರ್ಚೆ

ಕೃಷ್ಣಾ ಕೊಳ್ಳದಲ್ಲಿ "ಬಿ" ಸ್ಕೀಂ ಅಡಿಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ ನೀರು ಆಂಧ್ರ ಪ್ರದೇಶದ ಪಾಲಾಗುತ್ತಿರುವ ಬಗ್ಗೆ ಹಾಗೂ ಕೃಷ್ಣಾ ಮೇಲ್ದಂಡೆ ಯೋಜನೆಯ ಭೂಸ್ವಾಧೀನ ಕುರಿತು ದಿನಾಂಕ: 11.12.2018ರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆಗಳಾದ: 24(244) ಮತ್ತು 23(280)ಕ್ಕೆ ನೀಡಿದ ಉತ್ತರದಿಂದಾಗಿ ಉದ್ಭವಿಸಿದ ವಿಷಯಗಳ ಬಗ್ಗೆ **ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ ಹಾಗೂ ಮಾನ್ಯ ಸದಸ್ಯರಾದ ಶ್ರೀ ನಿರಾಣಿ ಹಣಮಂತ್ ರುದ್ರಪ್ಪ** ಅವರುಗಳಿಂದ ಅರ್ಧಗಂಟೆ ಕಾಲಾವಧಿ ಚರ್ಚೆ.

**ಕೆ.ಆರ್. ಮಹಾಲಕ್ಷ್ಮಿ**
**ಕಾರ್ಯದರ್ಶಿ (ಪ್ರ)**

---

ಪ್ರತಿ ದಿನದ ವಿಧಾನ ಪರಿಷತ್ತಿನ ಕಾರ್ಯಕಲಾಪಗಳ ಪಟ್ಟಿಯನ್ನು ವೆಬ್‌ಸೈಟ್‌ನಲ್ಲಿಯೂ ಸಹ ಪಡೆದುಕೊಳ್ಳಬಹುದು.

**www.kla.kar.nic.in/council.htm**